ಆಪ್ತಗೊಳಿಸುತ್ತದೆ. ಎಮಾದ್ ಪಾತ್ರ ಪೋಷಿಸಿರುವ ಶಹಾಬ್ ಹೊಸೇನಿ ಕಾನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದರು. ರಾಣ ಪಾತ್ರ ಪೋಷಿಸಿರುವ ತರಾನೆ ಅಲಿದೂಸ್ತಿ ಕೂಡ ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿರುವ ನಟಿ. ಅಲ್ಲದೆ ಈ ನಟಿ ಫರ್ಹಾದಿ ನಿರ್ದೇಶನದ ನಾಲ್ಕು ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳನ್ನು ಪೋಷಿಸಿರುವುದು ವಿಶೇಷ.

ನಿರ್ದೇಶಕ ಅಸ್ಗರ್ ಫರ್ಹಾದಿ ಮತ್ತು ನಟಿ ತರಾನೆ ಅಲಿದೂಸ್ತಿ ತಮ್ಮ ನಿಜಜೀವನದಲ್ಲಿಯೂ ತೊಡಗಿಸಿಕೊಂಡಿರುವ ಸಕ್ರಿಯ ಹೋರಾಟದ ಮನೋಭಾವವನ್ನು ಇತ್ತೀಚಿನ ಒಂದು ಘಟನೆಯ ಮೂಲಕ ನೆನಪಿಸಿಕೊಳ್ಳಬಹುದು. ಡೊನಾಲ್ಡ್ ಟ್ರಂಪ್ ಅಮೆರಿಕಾ ಅಧ್ಯಕ್ಷರಾದ ನಂತರ, ಕೆಲವು ಮುಸ್ಲಿಂ ದೇಶಗಳ ನಾಗರಿಕರಿಗೆ ವೀಸಾ ನಿರ್ಬಂಧಗಳನ್ನು ಹೇರಿ ವಿಶೇಷ ಸಂದರ್ಭದಲ್ಲಿ ಮಾತ್ರ ವೀಸಾ ನೀಡುವ ಹೊಸ ನೀತಿಯನ್ನು ಘೋಷಿಸಿದಾಗ ಈ ಇಬ್ಬರೂ ಕಲಾವಿದರು ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬಹಿಷ್ಕರಿಸಿ ಟ್ರಂಪ್ ನೀತಿಯನ್ನು ವಿರೋಧಿಸಿದ್ದರು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ತಮ್ಮದೇ ದೇಶ ಇರಾನ್‌ನಲ್ಲಿಯೂ ಹೇರಿರುವ ಹಲವು ನಿರ್ಬಂಧಗಳನ್ನು ತಮ್ಮ ಕಲೆಯ ಮೂಲಕ ಸೂಕ್ಷ್ಮವಾಗಿ ವಿರೋಧಿಸುತ್ತಿರುವ ಈ ಇಬ್ಬರು ಜಗತ್ತಿನ ಸಮಸ್ಯೆಗಳಿಗೆ ಸ್ಪಂದಿಸುವುದು ಕೂಡ ಅವರ ಸಿನಿಮಾ ಪ್ರೀತಿಯ ವಿಸ್ತರಣೆಯಾಗಿದೆ. ಕಲೆ ರಾಜಕೀಯದಿಂದ ಮುಕ್ತವಲ್ಲ. ಬದಲಾಗಿ ಅದು ಸಮಾಜಮುಖಿ. ಮಾನವೀಯತೆ, ರಾಜಕೀಯ ಮತ್ತು ಸಮುದಾಯದ ಸಂಗತಿಗಳಿಗೆ ಕಲೆ ಹೇಗೆ ಪ್ರತಿಸ್ಪಂದಿಸಬೇಕು ಎಂಬುದರ ಪ್ರತಿಪಾದಕರಂತೆ ಕಾಣುತ್ತಾರೆ ನಿರ್ದೇಶಕ ಅಸ್ಗರ್ ಫರ್ಹಾದಿ ಮತ್ತು ನಟಿ ತರಾನೆ ಅಲಿದೂಸ್ತಿ.


## ಗುರುಪ್ರಸಾದ್ ನಾರಾಯಣ

ಕಂಪ್ಯೂಟರ್ ವಿಜ್ಞಾನದಲ್ಲಿ ಬಿ.ಇ ಪದವಿ ಪಡೆದಿರುವ ಗುರುಪ್ರಸಾದ್ ಕೆಲಕಾಲ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡಿ ಪತ್ರಿಕೋದ್ಯಮದತ್ತ ಹೊರಳಿಕೊಂಡವರು. ಕನ್ನಡ ಪುಸ್ತಕಗಳ ಪ್ರಕಾಶಕರಾಗಿಯೂ ಅವರು ಗುರುತಿಸಿಕೊಂಡಿದ್ದಾರೆ. ಪ್ರಸ್ತುತ ಅವರು ಬೆಂಗಳೂರಿನಲ್ಲಿ 'ಆಕೃತಿ' ಎಂಬ ಪುಸ್ತಕ ಮಳಿಗೆಯನ್ನು ನಡೆಸುತ್ತಿದ್ದಾರೆ.